**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 02.01.2024

ಮು. ಪಾಟಿ ಸವಾಲು : ಆರೋಪಿ ಪರ ಶ್ರೀ ಬಿ.ಎಲ್.ಜಿ ವಕೀಲರಿಂದ

ನಾನು ಡ್ರೈವಿಂಗ್ ಕೆಲಸ ಮಾಡುವ ಸಲುವಾಗಿ ಆರ್.ಟಿ.ಓ ಕಛೇರಿಯಿಂದ ಬ್ಯಾಡ್ಜ ನಂಬರ್ ಕೊಡುತ್ತಾರೆ ಎಂದರೆ ಸರಿ. ಸದರಿ ಬ್ಯಾಡ್ಜ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಬ್ಯಾಡ್ಜ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲವೆಂದರೆ ಸರಿ.

ನಾನು ಚಾಲನೆ ಮಾಡುವ ಬಸ್ ನ ಮಾಲೀಕರನ್ನು ನ್ಯಾಯಾಲಯಕ್ಕೆ ಕರೆದು ವಿಚಾರಣೆ ಮಾಡಿಸಲು ತೊಂದರೆ ಇಲ್ಲ.

ಆರೋಪಿಯ ತಾಯಿ ಹೂವು ಕಟ್ಟಿಕೊಂಡು ಜೀವನ ಸಾಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಒಬ್ಬನೇ ಮಗ. ಆತ ಡಿಪ್ಲೋಮಾ ವ್ಯಾಸಾಂಗ ಮಾಡಿದ್ದು ಈಗ ಕೆಲಸಕ್ಕೆ ಹೋಗುತ್ತಾನೆ. ಆರೋಪಿ ಚೆಕ್ ನಲ್ಲಿ ಯಾವ ದಿನಾಂಕ ನಮೂದಿಸಿಕೊಟ್ಟರು ಎಂದು ನನಗೆ ನೆನಪಿಲ್ಲ.

ಆರೋಪಿ ಮತ್ತು ಆತನ ತಾಯಿ ಆರೋಪಿ ತಾಯಿಯ ಅಣ್ಣನ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸುಳ್ಳು.

ನಿಪಿ1 ಚೆಕ್ ಒಕ್ಕಣೆಗಳಿಗೂ ಹಾಗೂ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನನ್ನ ಸಮಕ್ಷಮವೇ ಆರೋಪಿ ಚೆಕ್ ಗೆ ಸಹಿ ಮಾಡಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನು ಮನೆಯನ್ನು ಸುಮಾರು 8 ವರ್ಷಗಳ ಹಿಂದೆ ಕಟ್ಟಿದ್ದು ಆಗ ನನಗೆ ರೂ.10-15 ಲಕ್ಷ ವೆಚ್ಚವಾಗಿತ್ತು.ನನ್ನ ಹೆಂಡತಿ ಟೈಲರಿಂಗ್ ಕೆಲಸ ಮಾಡುವ ಸಂಬಂಧ ದಾಖಲೆಯನ್ನು ಹಾಜರುಪಡಿಸಿಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.